(3) Bellavi
(4) Khora } P. H. Units, Tumkur Taluk.
(5) Thovinakere P. H. U. Koratagere Taluk.
(6) Badavanahalli P. H. U. Madhugiri Taluk.

(*b*) Drugs worth Rs. 5000 are being supplied.

(*c*) No

ಶ್ರೀ ಜಿ. ಎಸ್. ಶಿವನಂಜಪ್ಪ.—ಮಧುಗಿರಿ ತಾಲ್ಲೂಕಿನ ಬಡಾವಣೆಯಲ್ಲಿ ಪಿ. ಹೆಚ್. ಯು. ಇದೆಯೆಂದು ಹೇಳಿದ್ದೀರಿ. ಅಲ್ಲಿ ಕಂಬೈನ್ಡ್ ಹಾಸ್ಪಿಟಲ್ ಬೇಕು, ಆಸ್ಪತ್ರೆಯನ್ನು ಅಪಗ್ರೇಡ್ ಮಾಡಿ ಕೊಡಬೇಕು. ೩೫ ಸಾವಿರ ರೂಪಾಯಿಗಳನ್ನು ಕೊಡುತ್ತೇನೆ ಎಂದು ಒಬ್ಬ ದಾನಿಗಳು ಮುಂದೆ ಬಂದು ಸರ್ಕಾರಕ್ಕೆ ಅರ್ಜಿ ಕೊಟ್ಟಿದ್ದಾರೆ, ಅದು ತಮ್ಮ ಗಮನಕ್ಕೆ ಬಂದಿದೆಯೇ ?

† ಶ್ರೀ ಎ. ಕೆ. ಅಬ್ದುಲ್ ಸಮದ್.—ಅಪ್ ಗ್ರೇಡ್ ಹಾಸ್ಪಿಟಲ್‌ಗೆ ನಾವು ಮ್ಯಾಚಿಂಗ್ ಗ್ರಾಂಟ್ ಕೊಡುತ್ತಾ ಇದ್ದೇವೆ. ಆ ಯೂನಿಟ್ ಅಪ್‌ಗ್ರೇಡ್ ಲಿಸ್ಟ್‌ನಲ್ಲಿದ್ದರೆ ಅಪ್‌ಗ್ರೇಡ್ ಮಾಡಿಕೊಡುತ್ತೇವೆ.

ಶ್ರೀ ಜಿ. ಎಸ್. ಶಿವನಂಜಪ್ಪ.—೩೫ ಸಾವಿರ ರೂಪಾಯಿ ಡಿಪಾಜಿಟ್ ಮಾಡಲಿಕ್ಕೆ ತಯಾರಿದ್ದೇನೆ ಎಂದು ಒಬ್ಬ ದಾನಿ ಸರ್ಕಾರಕ್ಕೆ ಅರ್ಜಿ ಕೊಟ್ಟಿದಾನೆ. ಒಂದೂವರೆ ವರ್ಷದಿಂದ ನಾನು ಎರಡು, ಮೂರು ಅರ್ಜಿ ಬರೆದಿದ್ದೇನೆ. ಇದರ ಬಗ್ಗೆ ಇದುವರೆಗೆ ಮಾಹಿತಿ ಬಂದಿಲ್ಲ. ಆದ್ದರಿಂದ ಈ ಆಸ್ಪತ್ರೆಯನ್ನು ಅಪ್‌ಗ್ರೇಡ್ ಮಾಡಿಕೊಡುತ್ತೀರಾ ?

ಶ್ರೀ ಎ. ಕೆ. ಅಬ್ದುಲ್ ಸಮದ್.—ಅದು ನನ್ನ ನೋಟೀಸಿಗೆ ಬಂದಿಲ್ಲ. ಅದು ಅಪ್‌ಗ್ರೇಡ್ ಲಿಸ್ಟ್‌ನಲ್ಲಿದ್ದರೆ ಮ್ಯಾಚಿಂಗ್ ಗ್ರಾಂಟ್ ಕೊಟ್ಟು ಮಾಡಬಹುದು. It comes under policy question. If it doesn't deviate from the policy laid down. certainly, we will look into it.

ಶ್ರೀ ಜಿ. ಎಸ್. ಶಿವನಂಜಪ್ಪ.—ನನ್ನ ಕ್ಷೇತ್ರದಲ್ಲಿ ಸಜ್ಜೆಹೊಸಳ್ಳಿ, ಕೌಣದಾಳ, ಮತ್ತು ಚಿಕ್ಕ ತೊಡಲಕೆರೆ, ಈ ಗ್ರಾಮಗಳಲ್ಲಿ ಹೊಸದಾಗಿ ಮೂರು ಆಸ್ಪತ್ರೆಗಳನ್ನು ತೆಗೆಯಬೇಕು ಎಂದು ಸರ್ಕಾರದ ತೀರ್ಮಾನವಾಗಿದೆ. ಇದರಲ್ಲಿ ಯಾವುದಾದರೂ ಒಂದನ್ನು ಪ್ರಾರಂಭ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಕೆ. ಅಬ್ದುಲ್ ಸಮ್ಮದ್.—ಪಿ. ಹೆಚ್. ಯು.ಗೆ ವೇಕೆಂಟ್ ಬ್ಲಾಕ್ ಇದ್ದರೆ, We will take up the matter immediately ?

Upper Bhadra Project

520. SRI T. B. JAYACHANDRA (Kallambella).—Will the Chief Minister be pleased to state:—

(*a*) whether the water from Upper Bhadra Project can be fed to the drought prone areas of Tumkur and Chitradurga Districts ;

(*b*) whether the Upper Bhadra Project report has been prepared; if so, the cost of the Project and the total area to be benefitted (figures to be furnished talukwise);

(*c*) when it would be possible for the Government to take up the Project for construction ?

SRI R. GUNDU RAO (Chief Minister).—

(*a*) Yes.

(*b*) The Upper Bhadra Project is under investigation. Project report is not yet prepared.

(*c*) The Upper Bhadra Project has been included in VI Plan, 1978-83.

ಶ್ರೀ ಟಿ. ಬಿ. ಜಯಚಂದ್ರ,—ನನ್ನ ಮೊದಲನೇ ಪ್ರಶ್ನೆಗೆ ಹೌದು ಎಂದು ಉತ್ತರ ಕೊಟ್ಟಿದ್ದೀರಿ. ಚಿತ್ರದುರ್ಗ ಮತ್ತು ತುಮಕೂರಿನ ಯಾವ ಯಾವ ತಾಲ್ಲೂಕುಗಳಿಗೆ ನೀರು ಬರುವುದಕ್ಕೆ ಸಾಧ್ಯವಿದೆ ಎಂದು ತಿಳಿಸುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೊಸದುರ್ಗ, ಹಿರಿಯೂರು, ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕು ಹಾಗೂ ತುಮಕೂರು ಜಿಲ್ಲೆಯಲ್ಲಿ ಚಿಕ್ಕನಾಯ್ಕನಹಳ್ಳಿ, ಸಿರಾ ಮತ್ತು ಮಧುಗಿರಿ ತಾಲ್ಲೂಕುಗಳಿಗೆ ಬರುತ್ತದೆ.

ಶ್ರೀ ಟಿ. ಬಿ. ಜಯಚಂದ್ರ.—ನನ್ನ ಕ್ಷೇತ್ರಕ್ಕೆ ನೀರು ಬರುತ್ತದೆ ಸಂತೋಷ. ನನ್ನ ಸಿನೇ ಪ್ರಶ್ನೆಗೆ ಆರನೇ ಪ್ಲಾನ್‌ನಲ್ಲಿ ಸೇರಿಸಲಾಗಿದೆ ಎಂದು ಹೇಳಿದ್ದೀರಿ. ಪ್ರಾಜೆಕ್ಟ್ ಪ್ರಿಪೇರ್ ಮಾಡಿಲ್ಲ ಅಂದರೆ ಯಾತ ಕ್ಕೋಸ್ಕರ ವಿಳಂಬವಾಯಿತು.

ಶ್ರೀ ಆರ್. ಗುಂಡೂರಾವ್.—ವಿಳಂಬ ಅಂದರೆ, ನಮಗೆ ಎಷ್ಟು ನೀರು ಸಿಗುತ್ತದೆ, ಎಷ್ಟು ಭಾಗಕ್ಕೆ ವ್ಯವಸಾಯವಾಗುತ್ತದೆ, ರಾಜ್ಯ ಸರ್ಕಾರದ ದುಡ್ಡು ಎಷ್ಟು ಖರ್ಚಾಗಿದೆ, ಎಷ್ಟು ಖರ್ಚು ಮಾಡಬಹುದು, ಕೇಂದ್ರ ಸರ್ಕಾರದಿಂದ ಎಷ್ಟು ಸಹಾಯವಾಗುತ್ತದೆ—ಇವನ್ನೆಲ್ಲಾ ಹೊಂದಿಕೊಂಡಿರುತ್ತದೆ.

ಶ್ರೀ ಟಿ. ಬಿ. ಜಯಚಂದ್ರ.—ಟೇನೇ ಯೋಜನೆಯಲ್ಲಿ ಇದನ್ನು ಸೇರಿಸಿ ಪರಿಶೀಲನೆಮಾಡಿ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ನಾನು ಭಾವಿಸಿದ್ದೇನೆ. ಆರನೇ ಯೋಜನೆ ೧೯೭೮ ರಿಂದ ೧೯೮೩ ವರೆಗೆ ಇರುತ್ತದೆ. ಆದ್ದರಿಂದ ಎಷ್ಟು ದಿವಸಗಳಲ್ಲಿ ಪ್ರಾರಂಭ ಮಾಡುತ್ತೀರಿ ಎಂದು ಸದನಕ್ಕೆ ಆಶ್ವಾಸನೆ ಕೊಡುವುದಕ್ಕೆ ಸಾಧ್ಯವೆ ?

ಶ್ರೀ ಆರ್. ಗುಂಡೂರಾವ್,—ಎಲ್ಲಾ ಪ್ಲಾನ್‌ಮಾಡಿ ಕೇಂದ್ರ ಸರ್ಕಾರಕ್ಕೆ ಕಳಿಸಿಕೊಟ್ಟಿದ್ದೇವೆ. ಅವರಿಂದ ಒಪ್ಪಿಗೆ ಬಂದ ತಕ್ಷಣ ಪ್ರಾರಂಭ ಮಾಡುತ್ತೇವೆ.

ಶ್ರೀ ಕೆ. ಎಂ. ತಮ್ಮಯ್ಯ.—ಇದು ಚಿಕ್ಕಮಗಳೂರಿನಲ್ಲಿ ಹುಟ್ಟುವುದು, ಹೊರಗಡೆ ಹೋಗಿ ಸಹಾಯವಾಗುತ್ತದೆ. ಮೊದಲನೆಯದು ನಮ್ಮ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕಿಗೆ ನೀರು ಬರುತ್ತದೆ? ಎರಡನೆಯದು, ಇಲ್ಲಿ ಎಷ್ಟು ಸಾವಿರ ಎಕರೆ ಕಾಫಿ ತೋಟಗಳು, ಕಾಡುಗಳು ಮುಳುಗುತ್ತವೆ?

ಶ್ರೀ ಆರ್. ಗುಂಡೂರಾವ್.—ಆ ಡಿಟೇಲ್ಸ್ ಈ ಪ್ರಶ್ನೆಗೆ ಸಂಬಂಧಪಡದೇ ಇರುವುದರಿಂದ ಆ ವಿಷಯದ ಬಗ್ಗೆ ಮಾಹಿತಿ ನನ್ನ ಹತ್ತಿರ ಈಗ ಇಲ್ಲ. ನಮ್ಮ ಜಿಲ್ಲೆಯಲ್ಲೂ ಸಹ ನದಿ ಹುಟ್ಟುತ್ತದೆ ಬೇರೆ ಕಡೆಗೆ ಹರಿದು ಹೋಗುತ್ತದೆ, ಬೇರೆಯವರಿಗೆ ಅನುಕೂಲವಾಗುತ್ತಿದೆ, ಅದಕ್ಕೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಟಿ. ಚೌಡಯ್ಯ.—ಚಿತ್ರದುರ್ಗ ಸಹ ಡ್ರಾಟ್ ಪ್ರೋನ್ಸ್ ಏರಿಯಾದಲ್ಲಿ ಬರುತ್ತದೆ. ನಮ್ಮ ತಾಲ್ಲೂಕುಗಳಿಗೂ ಸಹ ನೀರನ್ನು ಒದಗಿಸುವ ಬಗ್ಗೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಚಿತ್ರದುರ್ಗ ಜಿಲ್ಲೆಯ ಯಾವಯಾವ ತಾಲ್ಲೂಕ್‌ಗಳಿಗೆ ಚಾನಲ್ ಬರುತ್ತದೆಂದು ಹೇಳಲಾಗಿದೆ, ಈಗ ನೀರಿನ ಚಾನಲ್ ಎಲ್ಲೆಲ್ಲಿಗೆ ಬರುತ್ತದೆಯೋ ಅಲ್ಲಿಗೆಲ್ಲಾ ಕೊಡುತ್ತೇವೆ ಎಲ್ಲಾ ಕಡೆಗೂ ಅಂದರೆ ಆಗುವುದಿಲ್ಲ.

ಶ್ರೀ ಜಿ. ಬಸವಣ್ಣಪ್ಪ.—ಭದ್ರಾ ಮೇಲ್ದಂಡೆ ಯೋಜನೆಯಿಂದ ಈಗಾಗಲೇ ಅಲ್ಲಿ ಸಮ್ಮರ್ ಕ್ರಾಪ್ ಬೆಳೆಯುವುದಕ್ಕೆ ಬದಲು ಕಮರ್ಷಿಯಲ್ ಕ್ರಾಪ್ ಬೆಳೆಯಿರಿ ಎಂದು ಹೇಳುತ್ತಿರುವುದು ಸರ್ಕಾರದ ವರ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಗುಂಡೂರಾವ್.—ಈ ಯೋಜನೆ ಪೂರೈಸಿದ ಮೇಲೆ ಯಾರಿಗೂ ಭಕ್ಕೆಯಾಗುವುದಿಲ್ಲ.